# ಗದಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ

********

## 2018–19 ನೇ ಸಾಲಿನ ಪರಿಷ್ಕೃತ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರಪಟ್ಟಿ

ಕರ್ನಾಟಕ ಸರಕಾರ
(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಅಧಿಸೂಚನೆ

ಕ್ರಮ ಸಂಖ್ಯೆ: /ಜಿ.ನೋಅ/CVC 01/2018-19,ಗದಗ ಜಿಲ್ಲೆ, ದಿನಾಂಕ: 27-12-2018

ವಿಷಯ: ಗದಗ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳ ವ್ಯಾಪ್ತಿಯಲ್ಲಿನ ಉಪ ನೋಂದಣಾಧಿಕಾರಿಗಳ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ನೋಂದಣಿಗಾಗಿ, ಪರಿಷ್ಕೃತ ಮಾರುಕಟ್ಟೆ ಮೌಲ್ಯಗಳ ಮಾರ್ಗಸೂಚಿಯ ದರಪಟ್ಟಿಯ ಕುರಿತು.

ಉಲ್ಲೇಖ: 1) ಗದಗ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 13–008–2018
2) ನರಗುಂದ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 31–07–2018
3) ಮುಂಡರಗಿ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 01–08–2018
4) ಶಿರಹಟ್ಟಿ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 30–07–2018
5) ಲಕ್ಷ್ಮೇಶ್ವರ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 01–08–2018
6) ರೋಣ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 04–08–2018
7) ಗಜೇಂದ್ರಗಡ ಉಪ ಸಮಿತಿಯ ನಡವಳಿ ಸಂಖ್ಯೆ: 01/2018–19 ದಿ: 04–08–2018
8) ಕೇಂದ್ರ ಮೌಲ್ಯ ಮಾಪನ ಸಮಿತಿಯ ಅಧಿಕೃತ ಜ್ಞಾಪನ ಸಂಖ್ಯೆ ನೋ.ಮು/ಸಿವಿಸಿ/485/2017–18, ದಿನಾಂಕ: 27–12–2018.

*******

1. ಗದಗ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿಯ ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯಗಳ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಿ ಹೊರಡಿಸಿದ ಉಲ್ಲೇಖ (1) ರಿಂದ (7) ರ ವರೆಗೆ ಸಾರ್ವಜನಿಕ ಆಕ್ಷೇಪಣೆ/ಸಲಹೆ/ಸೂಚನೆಗಳಿಗಾಗಿ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆ/ಸಲಹೆ/ಸೂಚನೆಗಳನ್ನು ಸಲ್ಲಿಸುವಂತೆ ಆಯಾ ಕಛೇರಿಗಳ ಅನುಗುಣವಾಗಿ ದಿನಾಂಕ 16–08–2018, 10–08–2018, 06–08–2018, 06–08–2018, 05–08–2018, ಮತ್ತು 10–08–2018 ರಂದು ಪ್ರಕಟಿಸಲಾಗಿತ್ತು.

2. ಪರಿಷ್ಕೃತ ಮಾರ್ಗಸೂಚಿ ದರಪಟ್ಟಿಗಳನ್ನ ಸಾರ್ವಜನಿಕರಿಗೆ ಲಭ್ಯವಾಗಿರುವಂತೆ ಆಯಾ ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ/ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿತ್ತು. ದಿನಾಂಕ: 29–09–2018, 25–09–2018, 24–09–2018, 07–09–2018, 28–08–2018, ಮತ್ತು 25–09–2018 ರಲ್ಲಿ ನಡೆದ ಮೌಲ್ಯಮಾಪನ ಉಪ-ಸಮಿತಿಗಳ ಸಭೆಯಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಆಕ್ಷೇಪಣೆ/ಸಲಹೆ/ಸೂಚನೆಗಳನ್ನು ಕೂಲಂಕುಷವಾಗಿ ಸಂಬಂಧಿಸಿದ ಉಪ-ಸಮಿತಿಗಳಲ್ಲಿ ಪರಿಶೀಲಿಸಿ, ಸೂಕ್ತ ಕ್ರಮಜರುಗಿಸಿ ಈ ಬಗ್ಗೆ ಕ್ರಮವಹಿಸಿರುವ ವಿಷಯಗಳನ್ನು ಉಲ್ಲೇಖ (8) ರ ಕೇಂದ್ರ ಮೌಲ್ಯ ಮಾಪನ ಸಮಿತಿಯಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆದು ಅಂತಿಮಗೊಳಿಸಲಾಗಿದೆ.

3. ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಸೆಕ್ಷನ್ 45-ಬಿ ಮತ್ತು ಕರ್ನಾಟಕ ಮುದ್ರಾಂಕ (ಆಸ್ತಿಯ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ಪರಿಷ್ಕರಣೆ ಮತ್ತು ಪ್ರಕಟಣೆಗಾಗಿ ಕೇಂದ್ರ ಮೌಲ್ಯ ಮಾಪನ ಸಮಿತಿಯ ರಚನೆ) ಅಧಿನಿಯಮಗಳು 2003ರ ಅಧಿನಿಯಮ 7(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೌಲ್ಯ ಮಾಪನ ಉಪ-ಸಮಿತಿಯು ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯಗಳ ಮಾರ್ಗಸೂಚಿಯ ದರಗಳನ್ನು ಈ ಮೂಲಕ ಪರಿಷ್ಕರಿಸಿ ಪ್ರಕಟಿಸಲಾಗಿದೆ. ಸದರಿ ಮಾರ್ಗಸೂಚಿ ದರಗಳು ಅನುಬಂಧದಲ್ಲಿರುವ ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕೆಳಗೆ ಪಟ್ಟಿಮಾಡಿರುವ ಉಪನೋಂದಣಿ ಕಛೇರಿ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳು ಮತ್ತು ಕಟ್ಟಡಗಳಿಗೆ ಅನ್ವಯಿಸುತ್ತದೆ. **ಈ ಅಧಿಸೂಚನೆಯು 2018-19 ನೇ ಸಾಲಿಗೆ ದಿನಾಂಕ: 01-01-2019 ರಿಂದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.**

4. ಈ ಕೆಳಕಂಡ 7 ಉಪ ನೋಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ಹಾಗೂ ಕಟ್ಟಡಗಳಿಗೆ ಅನ್ವಯಿಸುವಂತೆ ದರಗಳನ್ನು ಪರಿಷ್ಕರಿಸಿ ಅನುಬಂಧ 1, ಅನುಬಂಧ 2 ಮತ್ತು ಅನುಬಂಧ 3 ರಲ್ಲಿ ಪ್ರಕಟಿಸಲಾಗಿದೆ.

| ಕ್ರಸಂ | ಉಪನೋಂದಣಿ ಕಛೇರಿಯ ಹೆಸರು | ಪುಟ ಸಂಖ್ಯೆ | | |
|---|---|---|---|---|
| 1 | ಗದಗ ಹಿರಿಯ ಉಪ ನೋಂದಣಿ ಕಛೇರಿ | 01 | ರಿಂದ | 101 |
| 2 | ನರಗುಂದ ಉಪ ನೋಂದಣಿ ಕಛೇರಿ | 102 | ರಿಂದ | 159 |
| 3 | ಮುಂಡರಗಿ ಉಪ ನೋಂದಣಿ ಕಛೇರಿ | 160 | ರಿಂದ | 203 |
| 4 | ಶಿರಹಟ್ಟಿ ಉಪ ನೋಂದಣಿ ಕಛೇರಿ | 204 | ರಿಂದ | 230 |
| 5 | ಲಕ್ಷ್ಮೇಶ್ವರ ಉಪ ನೋಂದಣಿ ಕಛೇರಿ | 231 | ರಿಂದ | 274 |
| 6 | ರೋಣ ಉಪ ನೋಂದಣಿ ಕಛೇರಿ | 275 | ರಿಂದ | 289 |
| 7 | ಗಜೇಂದ್ರಗಡ ಉಪ ನೋಂದಣಿ ಕಛೇರಿ | 290 | ರಿಂದ | 340 |

ಜಿಲ್ಲಾ ([illegible])ಗಳು

ಜಿಲ್ಲಾನೋಂದಣಾಧಿಕಾರಿಗಳು ಮತ್ತು ಮುದ್ರಾಂಕಗಳ ಉಪ-ಆಯುಕ್ತರು ಗದಗ ಜಿಲ್ಲೆ

ಹಾಗೂ ಸದಸ್ಯರು ಕೇಂದ್ರ ಮೌಲ್ಯಮಾಪನ ಸಮಿತಿ

# ಅನುಬಂಧ–1

## 1. ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ವಿಶೇಷ ಸೂಚನೆಗಳು:

ಅ. ಕೆಳಕಂಡ ಕೃಷಿ ಜಮೀನು ಅಥವಾ ಭೂಪರಿವರ್ತನೆಯಾದ ಪೂರ್ಣ ವಿಸ್ತೀರ್ಣದ (ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಂತೆ ಹಾಗೂ ಭಾಗಶಃ ಇಲ್ಲದಂತೆ) ಅಭಿವೃದ್ಧಿಹೊಂದದ ಸ್ವತ್ತನ್ನು ಪರಭಾರೆ ಮಾಡಿದಾಗ ಕೆಳಕಂಡಂತೆ ದರಗಳನ್ನು ಅಳವಡಿಸುವುದು.

| | | |
|---|---|---|
| (i) | 5 ಗುಂಟೆ ವಿಸ್ತೀರ್ಣದ ವರೆಗಿನ ಜಮೀನಿಗೆ (5 ಗುಂಟೆ ಸೇರಿದಂತೆ) | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರ ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |

*ನಿವೇಶನ ದರ = ಯಾವ ಉದ್ದೇಶಕ್ಕೆ ಭೂಪರಿವರ್ತನೆ ಆಗಿರುತ್ತದೆಯೋ ಆ ಉದ್ದೇಶದ (ಅಂದರೆ ವಸತಿ, ಕೈಗಾರಿಕೆ ಮತ್ತು ವಾಣಿಜ್ಯೋಪಯೋಗಿ/ ವಸತಿಯೇತರ ಉದ್ದೇಶಗಳು) ಸ್ವತ್ತು/ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದ ನಿವೇಶನ ದರವನ್ನು (ವಸತಿಯೇತರ/ವಾಣಿಜ್ಯೋಪಯೋಗಿ/ ಸ್ವತ್ತಿನ ದರದೊಂದಿಗೆ) ಅಳವಡಿಸಿಕೊಳ್ಳತಕ್ಕದ್ದು.*

...ವಿ ನಿಯಮಗಳು 2003 ರ ನಿಯಮ 6(2)(ಅ) ರನ್ವಯ ಈ ಕೆಳಕಂಡಂತೆ ದರ ನಿಗದಿಪಡಿಸಿದೆ. ಪಟ್ಟಣ ಪಂಚಾಯ್ತಿ/ಪುರಸಭೆ/ನಗರಸಭೆ/ಮಹಾನಗರ ಪಾಲಿಕೆ ವ್ಯಾಪ್ತಿಯ "ಒಳಗೆ ಬರುವ ಸ್ಥಿರಾಸ್ತಿಗಳಿಗೆ" ...ಬಂಧಿಸಿದಂತೆ:

... ಕೆಳಕಂಡ ಭೂಪರಿವರ್ತನೆಯಾದ ಪೂರ್ಣ ವಿಸ್ತೀರ್ಣದ (ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಂತೆ ಹಾಗೂ ಭಾಗಶಃ ಇಲ್ಲದಂತೆ) ಅಭಿವೃದ್ಧಿ ಹೊಂದದ ಸ್ವತ್ತನ್ನು ಪರಭಾರೆ ಮಾಡಿದಾಗ ಕೆಳಕಂಡಂತೆ ದರಗಳನ್ನು ಅಳವಡಿಸುವುದು.

| | | |
|---|---|---|
| (ii) | 5 ಗುಂಟೆಯಿಂದ ಮೇಲ್ಪಟ್ಟು 7.5 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (7.5 ಗುಂಟೆ ಸೇರಿದಂತೆ) | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 70% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |
| (iii) | 7.5 ಗುಂಟೆಯಿಂದ ಮೇಲ್ಪಟ್ಟು 10 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (10 ಗುಂಟೆ ಸೇರಿದಂತೆ) | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 65% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |
| (iv) | 10 ಗುಂಟೆಯಿಂದ ಮೇಲ್ಪಟ್ಟು 20 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (20 ಗುಂಟೆ ಸೇರಿದಂತೆ) | ಆಯಾ ಪ್ರದೇಶದ ನಿವೇಶನದ ದರವನ್ನು 60% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |
| (v) | 20 ಗುಂಟೆಯಿಂದ ಮೇಲ್ಪಟ್ಟು 40 ಗುಂಟೆಯವರೆಗೆ (1 ಎಕರೆ) ವಿಸ್ತೀರ್ಣದ ಜಮೀನಿಗೆ (40 ಗುಂಟೆ ಸೇರಿದಂತೆ) | ಆಯಾ ಪ್ರದೇಶದ ನಿವೇಶನದ ದರವನ್ನು 55% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |
| (vi) | 1 ಎಕರೆ ಮೇಲ್ಪಟ್ಟ ವಿಸ್ತೀರ್ಣದ ಜಮೀನಿಗೆ | ಆಯಾ ಪ್ರದೇಶದ ನಿವೇಶನದ ದರವನ್ನು 50% ರಷ್ಟು ಅಥವಾ ಆಯಾ ಕೃಷಿ ಜಮೀನಿನ ಈ ಕೆಳಗಿನ ತರಹದ<br>ಕೈಗಾರಿಕೋಪಯೋಗಿ — 55 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ)<br>ವಾಸೋಪಯೋಗಿ — 65 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ)<br>ವಾಣಿಜ್ಯೋಪಯೋಗಿ/ ವಸತಿಯೇತರ — 80 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ)<br>...ರ ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು. |

*ನಿವೇಶನ ದರ = ಯಾವ ಉದ್ದೇಶಕ್ಕೆ ಭೂಪರಿವರ್ತನೆ ಆಗಿರುತ್ತದೆಯೋ ಆ ಉದ್ದೇಶದ (ಅಂದರೆ ವಸತಿ, ಕೈಗಾರಿಕೆ ಮತ್ತು ವಾಣಿಜ್ಯೋಪಯೋಗಿ/ ವಸತಿಯೇತರ ಉದ್ದೇಶಗಳು) ಸ್ವತ್ತು/ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದ ನಿವೇಶನ ದರವನ್ನು (ವಸತಿಯೇತರ/ವಾಣಿಜ್ಯೋಪಯೋಗಿ/ ಸ್ವತ್ತಿನ ದರದೊಂದಿಗೆ) ಅಳವಡಿಸಿಕೊಳ್ಳತಕ್ಕದ್ದು.*

ಉಪ ನೋಂದಣಾಧಿಕಾರಿಗಳು
ಗದಗ

ಜಿಲ್ಲಾ ನೋಂದಣಾಧಿಕಾರಿಗಳು
ಗದಗ

ಉಪ ನೋಂದಣಾಧಿಕಾರಿಗಳು
ಗದಗ